**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2017** **ಅ.ಸಾ.1**

**ಚಾ.ಸಾ.2**

| | | |
|---|---|---|
| ಸಾಕ್ಷಿದಾರರ ಹೆಸರು | - | ವಿದ್ಯಾಧರ ನಾಯಕ್ |
| ತಂದೆಯ ಹೆಸರು | - | ಅನಂತ ನಾಯಕ್ |
| ವಯಸ್ಸು | - | 42 ವರ್ಷ |
| ಉದ್ಯೋಗ | - | ಇಲ್ಕ್ಟೀಷಿಯನ್ |
| ವಿಳಾಸ | - | ಸಣ್ಣಕ್ಕಿಬೆಟ್ಟು, ಹೆರ್ಗ ಗ್ರಾಮ, ಉಡುಪಿ |

ದಿನಾಂಕಃ 15-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ಮೃತ ಸಂತೋಷ ನಾಯಕ್ ನನ್ನ ಅಣ್ಣ. ಚಾಸಾ1 ಮೃತ ಸಂತೋಷನ ಹೆಂಡತಿ. ಚಾಸಾ3 ನನ್ನ ತಾಯಿ. ಚಾಸಾ4 ನನ್ನ ಅತ್ತಿಗೆ. ಚಾಸಾ5 ಮತ್ತು 6 ಮೃತ ಸಂತೋಷನ ಮಕ್ಕಳು. ಚಾಸಾ7 ನನ್ನ ಅಣ್ಣ.

2. ಸಂತೋಷ ನಾಯಕ್ ಮತ್ತು ಆತನ ಪತ್ನಿ ಸುಮಿತ್ರ 2017 ನೇ ಇಸವಿಯಲ್ಲಿ ಕೊಂಡಾಡಿ ಎಂಬಲ್ಲಿ ರುವ ಅವರ ಮನೆಯಲ್ಲಿ ವಾಸ ಮಾಡುತ್ತಿದ್ದರು. ಈ ಪ್ರಕರಣದ 4 ರಿಂದ 6 ನೇ ಆರೋಪಿತರ ಪರಿಚಯ ಇಲ್ಲ. ಮೃತ 1 ಮತ್ತು 7 ನೇ ಆರೋಪಿತರ ಪರಿಚಯ ಇಲ್ಲ. ಸಂತೋಷ ನಾಯಕ್ ಕೊಲೆಯಾಗಿ ಮೃತ ಪಟ್ಟಿರುತ್ತಾನೆ. ಈ ಬಗ್ಗೆ ಹಿರಿಯಡ್ಕ ಪೋಲಿಸ್ ಠಾಣೆಗೆ ಚಾಸಾ1 ಇವರು ದೂರು ನೀಡಿರುತ್ತಾರೆ. ಆರೋಪಿ 4 ರಿಂದ 6 ಮತ್ತು ಮೃತ ಸಂತೋಷನ ಮಧ್ಯೆ ಇದ್ದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಈ ಬಗ್ಗೆ ಒಂದನೇ ಆರೋಪಿತನು ಸಂತೋಷನಿಗೆ ಬೆದರಿಕೆ ಹಾಕಿದ ವಿಚಾರ ಗೊತ್ತಿಲ್ಲ. ನಾನು ಆರೋಪಿತರ ವಿರುದ್ಧ ಯಾವುದೇ ದೂರು ಕೊಟ್ಟಿರುವುದಿಲ್ಲ. ಆರೋಪಿತರು ನನಗೆ ಮತ್ತು ನನ್ನ ಮನೆಯವರಿಗೆ ಪಿಸ್ತೂಲು ತೋರಿಸಿ ಬೆದರಿಕೆ ಹಾಕಿದ್ದು ಇಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿಲ್ಲ. ಪೋಲಿಸರು

ನನ್ನ ಅಣ್ಣನ ಕೊಲೆ ಪ್ರಕರಣದಲ್ಲಿ ನನ್ನನ್ನು ಕರೆಸಿ ದಾಖಲೆಗಳಲ್ಲಿ ಸಹಿ ಪಡೆದುಕೊಂಡಿದ್ದಾರೆ. ಈಗ ತೋರಿಸಿದ ದಿನಾಂಕ 06-01-2017 ರ ಮಹಜರಿನಲ್ಲಿ ನನ್ನ ಸಹಿ ಇದೆ. ಆ ಮಹಜರನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಛಾಯಾ ಚಿತ್ರವನ್ನು ನಿಪಿ-2 ಎಂದು ಗುರುತಿಸಲಾಯಿತು. ಅದೇ ದಿನ ಇನ್ನೊಂದು ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಛಾಯಾ ಚಿತ್ರವನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ಅದೇ ದಿನ ತಯಾರಿಸಿದ ಇನ್ನೊಂದು ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ. ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಛಾಯಾ ಚಿತ್ರವನ್ನು ನಿಪಿ-7 ಎಂದು ಗುರುತಿಸಲಾಯಿತು. ಅವುಗಳಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮದಲ್ಲಿ ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ ಹಾಗೂ ಸ್ಥಳ ಪರಿಶೀಲಿಸಿ ಯಾವುದೇ ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

1. ನನ್ನ ಅಣ್ಣ ಸಂತೋಷ ನಾಯಕನು ಆರೋಪಿಗಳಾದ ನಿತ್ಯಾನಂದ ನಾಯಕ್, ಜಯಂತ್ ಪೈ, ವಿನ್ ಫ್ರೆಡ್ ಆರ್ಥರ್ ಎಂಬರೊಂದಿಗೆ ಹಣಕಾಸಿನ ವ್ಯವಹಾರ ಮಾಡಿದ್ದು ಅವರಿಗೆ ನನ್ನ ಅಣ್ಣ ಹಣ ಕೊಡಲು ಬಾಕಿ ಇದ್ದು ಈ ಆರೋಪಿತರು ನನ್ನ ಮನೆಗೆ ಮೃತ ಸಂತೋಷ ನಾಯಕ ಇರುವಾಗ ಬಂದು ಹಣಕ್ಕಾಗಿ ಪೀಡಿಸುತ್ತಿದ್ದು ಜೀವ ಬೆದರಿಕೆ ಹಾಕಿದ್ದು ಕಾರಣ ಮೃತ ಸಂತೋಷ ನಾಯಕ್ ಅವರಿಗೆ ನೀಡಬೇಕಾಗಿದ್ದು ಹಣದ ಬಗ್ಗೆ ಚೆಕ್ ಕೊಟ್ಟಿದ್ದು ನಂತರದ ದಿನಗಳಲ್ಲಿ ಆರೋಪಿತರು ಮನೆಗೆ ಬಂದು ಚೆಕ್ ಬೌನ್ಸ್ ಆಗಿದೆ ಎಂದು ತಿಳಿಸಿ ಆತನಿಗೆ ಬೆದರಿಸುತ್ತಿದ್ದು ನಂತರ ಒಂದೆರಡು ಬಾರಿ ಈ ಆರೋಪಿತರು ಒಂದನೇ ಆರೋಪಿಯನ್ನು ಕರೆದುಕೊಂಡು ಹಣ ಕೊಡದೇ ಇದ್ದಲ್ಲಿ ಸುಮ್ಮನೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದು ದಿನಾಂಕ 02-12-2016 ರಂದು ಸಂಜೆ 7-00 ಗಂಟೆಗೆ ನಾನು ಮನೆಗೆ ಬಂದಾಗ ಚಾಸಾ1 ಮನೆಯಲ್ಲಿದ್ದು ಅವರು ನನ್ನ ಬಳಿ ಮೃತ ಸಂತೋಷನು ಮಣಿಪಾಲದಲ್ಲಿ ನನ್ನನ್ನು ಬಿಟ್ಟು ಮಕ್ಕಳನ್ನು ಬಡಗುಬೆಟ್ಟು ಶಾಲೆಗೆ ಬಿಟ್ಟ ನಂತರ

ಮನೆಗೆ ಬಾರದೇ ಕಾಣೆಯಾಗಿದ್ದು ಮೊಬೈಲ್ ಗೆ ಕರೆ ಮಾಡಿದರೆ ಸ್ವಿಚ್ ಆಫ್ ಬರುತ್ತಿದ್ದು, ಆ ದಿನ ರಾತ್ರಿ 10 ಗಂಟೆಯಾದರೂ ಬಾರದೇ ಇದ್ದು, ನಾವು ಮನೆಯಲ್ಲಿ ಮಲಗಿದ್ದು ರಾತ್ರಿ 1 ಗಂಟೆ ಸುಮಾರಿಗೆ ಒಂದನೇ ಆರೋಪಿಯು ಇತರೆ ಮೂರು ನಾಲ್ಕು ಮಂದಿಯೊಂದಿಗೆ ಬಂದು ನಮ್ಮ ಮನೆ ಬಾಗಿಲು ಒಡೆದು ಪ್ರವೀಣ್ ಕುಲಾಲನು ನಮಗೆಲ್ಲಾ ಪಿಸ್ತೂಲು ತೋರಿಸಿ ನಮ್ಮ ಮನೆಯ ಕಪಾಟನ್ನು ಒಡೆಸಿ ದಾಖಲೆ ಪತ್ರ ತೆಗೆದುಕೂಂಡಿದ್ದು ಮೃತ ಸಂತೋಷ ಕೆಲವರಿಂದ ಹಣ ಪಡೆದು ಮೋಸ ಮಾಡಿರುತ್ತಾನೆ ಹಣ ಎಲ್ಲಿಟ್ಟಿದ್ದಾನೆ ಎಂದು ಕೇಳುತ್ತಾ ಸಂತೋಷ ತನ್ನ ಜೊತೆಯಲ್ಲಿದ್ದಾನೆ ಅವನು ಹಣವನ್ನು ದೇವಗುಡಿಯ ನೆಲದಲ್ಲಿ ಅಡಗಿಸಿಟ್ಟಿದ್ದಾನೆ ಎಂದು ಹೇಳಿ ನನ್ನಿಂದಲೇ ಪಿಕ್ಕಾಸಿನಿಂದ ದೇವರ ಗುಡಿಯ ನೆಲ ಅಗೆಸಿ ಹಣ ಸಿಗದೇ ಇದ್ದುದರಿಂದ ಬಳಿಕ ಮನೆಯಲ್ಲಿದ್ದ ಹೆಂಗಸರನ್ನೆಲ್ಲಾ ಮೃತ ಉಪಯೋಗಿಸುತ್ತಿದ್ದ ಬಿಳಿ ಕಾರಿನಲ್ಲಿ ಕರೆದುಕೊಂಡು ನನ್ನನ್ನು ಸ್ಕೂಟರಿನಲ್ಲಿ ಕರೆದುಕೊಂಡು ಬರುವಂತೆ ಆತನೊಂದಿಗೆ ಇದ್ದ ಇನ್ನೊಬ್ಬ ವ್ಯಕ್ತಿಗೆ ತಿಳಿಸಿ ಕಾರನ್ನು ಹಿಂಬಾಲಿಸುವಂತೆ ಹೇಳಿ ಕಾರನ್ನು ಹಿಂಬಾಲಿಸಿ ಕೊಂಡು ಹೋಗುವಾಗ ಕಾರಿನ ಸಂಖ್ಯೆ ಗಮನಿಸಿದ್ದು ಕೆಎ 20 ಜಡ್ 7586 ಅಗಿದ್ದು ಹಿಂಬಾಲಿಸುತ್ತಾ ಪೆರ್ಣಂಕಿಲ ಮನೆ ಒಂದಕ್ಕೆ ಕರೆದುಕೊಂಡು ಹೋಗಿದ್ದು ಅಲ್ಲಿ 4 ರಿಂದ 6 ನೇ ಆರೋಪಿತರು ಬಂದು ಒಂದನೇ ಆರೋಪಿಯೊಂದಿಗೆ ಮಾತನಾಡಿ ನಮ್ಮಲ್ಲಿ ಸಂತೋಷ ನಾಯಕ ಕೊಡಬೇಕಾದ ಹಣವನ್ನು ಕೊಡುವಂತೆ ಬೆದರಿಸಿದ್ದು ನಂತರ ಒಂದನೇ ಆರೋಪಿ ಕಪ್ಪು ಬಣ್ಣದ ಕಾರಿನಲ್ಲಿ ಮತ್ತೊಂದು ಮನೆಗೆ ಕರೆದುಕೊಂಡು ಹೋಗಿದ್ದು ಆ ಮನೆಯವರು ಆಕ್ಷೇಪಿಸಿದ್ದಕ್ಕೆ ಒಂದನೇ ಆರೋಪಿ ಆತನ ಸಹಚರರೊಂದಿಗೆ ಇನ್ನೊಂದು ಮನೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಗೆ 4 ರಿಂ 6 ನೇ ಆರೋಪಿತರು ಬಂದಿದ್ದು ಒಂದನೇ ಆರೋಪಿ ಪಿಸ್ತೂಲು ತೋರಿಸಿ ವಿನ್ನುವಿಗೆ ಕೊಡಬೇಕಾಗ ರೂ.85 ಲಕ್ಷ ಕೊಡಬೇಕು ಮತ್ತು ಆಸ್ತಿ ಮನೆಯನ್ನು 4 ನೇ ಅರೋಪಿಯ ಹೆಸರಿಗೆ ಬರಯಬೇಕು ಎಂದು ಬೆದರಿಸಿ ನನ್ನ ಅತ್ತಿಗೆಯಂದಿರ ಮೈಮೇಲೆ ಇದ್ದ ಚಿನ್ನಾಭರಣವನ್ನು ದೋಚಿ ವಿನ್ನುನನ್ನು ಕಪ್ಪು ಬಣ್ಣದ ಕಾರಿನಲ್ಲಿ ಮನೆಗೆ ಬಿಟ್ಟಿದ್ದು ನಾನು ಸ್ಕೂಟರ್ ನಲ್ಲಿ ಬಂದಿದ್ದು ಈ ವಿಚಾರವನ್ನು ಯಾರಿಗಾದರೂ ಹೇಳಿದಲ್ಲಿ ಸುಮ್ಮನೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದ್ದು ನಂತರ ಇದೇ ಕಾರಣದಿಂದ ಆರೋಪಿತರು ನನ್ನ ಅಣ್ಣ ಸಂತೋಷನನ್ನು ಕೊಲೆ ಮಾಡಿ ಶವ ನಾಶ ಮಾಡಿದ ಅನುಮಾನ ಇದೆ ಎಂದು ನನಗೆ ಈಗ ಓದಿ ಹೇಳಿದಂತೆ ನಿಪಿ-8 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

2. ದಿನಾಂಕ 06-01-2017 ರಂದು 1 ನೇ ಆರೋಪಿ ಪಿರ್ಯಾದಿ ಮತ್ತು ಇತರರನ್ನು ಬಲವಂತವಾಗಿ ಕರೆದುಕೊಂಡು ಬಂದ ಸ್ಥಳಕ್ಕೆ ಪೋಲಿಸರು ಬಂದಾಗ ನಾನು ಹಾಜರಿದ್ದು ಆ ಮನೆಯನ್ನು ತೋರಿಸಿಕೊಟ್ಟಿದ್ದು ಸದ್ರಿ ಮನೆ ಪೆರ್ಣಂಕಿಲ ಗ್ರಾಮದ ವರ್ವಾಡಿ ಎಂಬಲ್ಲಿ ಇದ್ದು ಮನೆ ಶಂಕರ ಕುಲಾಲ ಎಂಬವರಿಗೆ ಸೇರಿದ್ದು ಆ ಮನೆಯನ್ನು ಪೋಲಿಸರು ಪಂಚರ ಸಮಕ್ಷಮ ಪರಿಶೀಲಿಸಿ ನಿಪಿ 1 ರಂತೆ ಮಹಜರು ಬರೆದು ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯ ನಿಪಿ 2 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಪೋಲಿಸರು ಉಡುಪಿ ತಾಲೂಕು ಪೆರ್ಣಂಕಿಲ ಗ್ರಾಮದ ರತ್ನಶ್ರೀ ನಿಲಯ ಎನ್ನುವ ಮನೆಗೆ ಬಂದಿದ್ದು ಆ ಸಮಯ ನಾನು ಹಾಜರಿದ್ದು ಪೋಲಿಸರಿಗೆ ಆರೋಪಿತರು ನನ್ನನ್ನು ಬಲವಂತವಾಗಿ ಕರೆದುಕೊಂಡು ಹೋದ ಸ್ಥಳವನ್ನು ತೋರಿಸಿಕೊಟ್ಟಿದ್ದು ಆ ಮನೆ ನನಗೆ ಸಂಬಂಧಿಸಿದ್ದಾಗಿದ್ದು ಆ ಸ್ಥಳವನ್ನು ಪರಿಶೀಲಿಸಿ ಪಂಚರ ಸಮಕ್ಷಮ ನಿಪಿ-3 ರಂತೆ ಮಹಜರು ಬರೆದು ನನ್ನ ಸಹಿ ಪಡೆದು ನಿಪಿ-4 ಮತ್ತು 5 ರಂತೆ ಛಾಯಾ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

3. ಅದೇ ದಿನ ಪೋಲಿಸರು ಪೆರ್ಣಂಕಿಲ ಗ್ರಾಮದ ಪಡುಬೆಟ್ಟುವಿನ ಪುಷ್ಪಾ ನಿಲಯಕ್ಕೆ ಬಂದಿದ್ದು ಆ ಸಮಯ ನಾನು ಹಾಜರಿದ್ದು ಇದೇ ಮನೆಯಲ್ಲಿ ಆರೋಪಿತರು ನನ್ನನ್ನು ಬೆದರಿಸಿ ನನ್ನ ಅತ್ತಿಗೆಯಂದಿರ ಚಿನ್ನಾಭರಣಗಳನ್ನು ಬಲವಂತವಾಗಿ ತೆಗೆದುಕೊಂಡು ಹೋದ ಸ್ಥಳ ಎಂದು ತೋರಿಸಿ ಕೊಟ್ಟಿದ್ದು ಆ ಸಮಯ ಪೋಲಿಸರು ಪಂಚರ ಸಮಕ್ಷಮ ನಿಪಿ-6 ರಂತೆ ಮಹಜರು ಬರೆದು ನಿಪಿ-7 ರಂತೆ ಛಾಯಾ ಚಿತ್ರ ತೆಗೆದಿದ್ದಾರೆ ಎಂದರೆ ಸರಿಯಲ್ಲ.

4. ನಂತರದಲ್ಲಿ ದಿನಾಂಕ 10-01-2017 ರಂದು ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿಕೊಂಡಿದ್ದು ಆಗ 6 ನೇ ಆರೋಪಿ ಠಾಣೆಯಲ್ಲಿ ಹಾಜರಿದ್ದು ಆತನನ್ನು ನಾನು ನೋಡಿ ಗುರುತಿಸಿದ್ದು ಆ ಸಮಯ 2 ನೇ ಆರೋಪಿ ಸಹಾ ಠಾಣೆಯಲ್ಲಿ ಸಹಾ ಆತ ಒಂದನೇ ಆರೋಪಿಯೊಂದಿಗೆ ನಮ್ಮ ಮನೆಗೆ ಬಂದು ನಮ್ಮನ್ನು ಅಪಹರಣ ಮಾಡಿಕೊಂಡ ಹೋದ ವ್ಯಕ್ತಿ ಎಂದು ಗುರುತಿಸಿದ್ದೇನೆ ಎಂದರೆ ಸರಿಯಲ್ಲ. ನಂತರ ದಿನಾಂಕ 12-01-2017 ರಂದು ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿದ್ದು ಆ ಸಮಯ ಠಾಣೆಯಲ್ಲಿ ಆರು ಮಂದಿ ಆರೋಪಿತರನ್ನು ನೋಡಿದ್ದು ಅವರನ್ನು ಪೋಲಿಸರು ವಿಚಾರಿಸಿದಾಗ ಅವರು ನನ್ನ ಅಣ್ಣನನ್ನು ಕೊಲೆ ಮಾಡಿರುವ ಬಗ್ಗೆ ತಪ್ಪ ಒಪ್ಪಿಕೊಂಡಿದ್ದು ಈ ಬಗ್ಗೆ ನಾನು ಪೋಲಿಸರಿಗೆ ಈಗ ಓದಿ ಹೇಳಿದಂತೆ ನಿಪಿ-9 ರಂತೆ ಮರು ಹೇಳಿಕೆ

ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೇ ನನ್ನ ಅಣ್ಣನನ್ನು ಕೊಲೆ ಮಾಡಿದ ವಿಚಾರ ತಿಳಿದಿದ್ದರೂ ಸಹಾ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ** ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.